ಕರ್ನಾಟಕ ಸರ್ಕಾರ

ಕಾಲೇಜು ಶಿಕ್ಷಣ ಇಲಾಖೆ

ಸಂಖ್ಯೆ: ಕಾಶಿಇ/06/ನ್ಯಾಕ್.ಅಬಿ/2017-18

ಕಾಲೇಜು ಶಿಕ್ಷಣ ಆಯುಕ್ತರ ಕಛೇರಿ,
ಅರಮನೆ ರಸ್ತೆ, ಬೆಂಗಳೂರು-560001.
ದಿನಾಂಕ: 08.01.2018.

# ಸೇರ್ಪಡೆ ಆದೇಶ

ವಿಷಯ: ನ್ಯಾಕ್ ಪ್ರಕ್ರಿಯೆಗೆ ಒಳಪಡುವ ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳಿಗೆ ಬಿಡುಗಡೆಗೊಳಿಸಿರುವ ಅನುದಾನವನ್ನು ಬಳಸಿಕೊಳ್ಳುವ ಬಗ್ಗೆ.

ಉಲ್ಲೇಖ:
1) ಈ ಕಛೇರಿಯ ಸಮಸಂಖ್ಯೆ ಅನುದಾನ ಬಿಡುಗಡೆ ಆದೇಶಗಳ ದಿನಾಂಕ: 25.11.2017, 01.09.2017 & 22.06.2017.
2) ಸಮನ್ವಯಾಧಿಕಾರಿಗಳು, ರಾಜ್ಯ ಗುಣಮಟ್ಟ ಭರವಸಾ ಕೋಶ ಇವರ ಸಲ್ಲಿಕೆ ದಿನಾಂಕ: 08.01.2018.

* * * * * * *

ಸೂಚಿತ ವಿಷಯಕ್ಕೆ ಸಂಬಂಧಿಸಿದಂತೆ ನ್ಯಾಕ್ ಮೌಲ್ಯಮಾಪನ ಮತ್ತು ಮರುಮೌಲ್ಯಮಾಪನ ಪ್ರಕ್ರಿಯೆಗಳಿಗೆ ಒಳಪಡುವ ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳಿಗೆ ಉಲ್ಲೇಖ(1)ರ ಆದೇಶಗಳಲ್ಲಿ "ರಾಷ್ಟ್ರೀಯ ಅಂಗೀಕೃತ ಪರಿಷತ್ತು" ಕಾರ್ಯಕ್ರಮದಡಿಯಲ್ಲಿ ಲೆಕ್ಕಶೀರ್ಷಿಕೆ-2202-03-112-0-09-059ರಲ್ಲಿ ಕಾಲೇಜುಗಳ ನ್ಯಾಕ್ ಪ್ರಕ್ರಿಯೆ ಶುಲ್ಕವನ್ನು ಸಲ್ಲಿಸಲು, ಸ್ವಯಂಮೌಲ್ಯಮಾಪನ ವರದಿ ತಯಾರಿಕೆ, ಪೀರ್ ತಂಡದ ಭೇಟಿ ವೆಚ್ಚ, IQAC Activities ಗಳಿಗೆ ಅನುದಾನವನ್ನು ಬಿಡುಗಡೆ ಮಾಡಲಾಗಿರುತ್ತದೆ.

ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳ ಪ್ರಾಂಶುಪಾಲರುಗಳು ನ್ಯಾಕ್ ಪ್ರಕ್ರಿಯೆಗೆ ಸಂಬಂಧಪಟ್ಟ ಅನುದಾನವನ್ನು ಖಜಾನೆ-2ರಿಂದ ಸೆಳೆಯಲು ಬಿಲ್ಲುಗಳನ್ನು ಸಲ್ಲಿಸಿ ತಿರಸ್ಕೃತಗೊಂಡಿರುವುದು ಕಂಡುಬರುತ್ತದೆ. ನ್ಯಾಕ್ ಸಂಸ್ಥೆಯು ಕೇಂದ್ರ ಸರ್ಕಾರವಾಗಿದ್ದು, ನ್ಯಾಕ್ ಪ್ರಕ್ರಿಯೆ ಶುಲ್ಕವನ್ನು ಎರಡು ಕಂತುಗಳಲ್ಲಿ ಡಿ.ಡಿ. ಮೂಲಕ ನ್ಯಾಕ್ ಸಂಸ್ಥೆಗೆ ಪಾವತಿಸಿ, ಸದರಿ ಡಿ.ಡಿ. ಸಂಖ್ಯೆಯನ್ನು Online ನಲ್ಲಿ ನಮೂದಿಸುವುದು ಖಡ್ಡಾಯವಾಗಿರುತ್ತದೆ. ಕಾಲೇಜುಗಳ IQAC ಘಟಕ ಬಲವರ್ಧನೆಗಾಗಿ ವಾರ್ಷಿಕ ವೆಚ್ಚಕ್ಕಾಗಿ ಅನುದಾನ ಬಿಡುಗಡೆ ಮಾಡಿದ್ದು, ಹಾಗೂ ಪೀರ್ ತಂಡದ ವೆಚ್ಚದ ಅನುದಾನವನ್ನು ಪ್ರಾಂಶುಪಾಲರುಗಳಿಗೆ ಪಾವತಿಸಲು ಖಜಾನೆ-2ರ ಈಗಿನ ವ್ಯವಸ್ಥೆಯಲ್ಲಿ ಬದಲಾವಣೆಯಾಗಿರುವುದರಿಂದ ಉಲ್ಲೇಖ(1)ರ ಇಲಾಖೆಯ 03 ಅನುದಾನ ಬಿಡುಗಡೆ ಆದೇಶದ ಭಾಗದಲ್ಲಿ ಕೆಳಕಂಡಂತೆ ಸೇರ್ಪಡಿಸಿ ಆದೇಶಿಸಲಾಗಿದೆ.

**"ಸದರಿ ಅನುದಾನವನ್ನು ಆಯಾ ಕಾಲೇಜುಗಳ ಪ್ರಾಂಶುಪಾಲರುಗಳು ಡಿ.ಸಿ ಬಿಲ್ಲಿನಲ್ಲಿ ಸೆಳೆದು ಪ್ರಾಂಶುಪಾಲರ ಖಾತೆಗೆ ಜಮೆಮಾಡಿ ಮುಂದಿನ ಕ್ರಮಕ್ಕೈಗೊಳ್ಳುವುದು".**

8/1/18

ಕಾಲೇಜು ಶಿಕ್ಷಣ ನಿರ್ದೇಶಕರು

ಇವರಿಗೆ:

1) **ಲೆಕ್ಕಾಧಿಕಾರಿಗಳು, ಕಾಲೇಜು ಶಿಕ್ಷಣ ಆಯುಕ್ತರ ಕಛೇರಿ, ಬೆಂಗಳೂರು.**
2) **ಸಂಬಂಧಪಟ್ಟ ಕಾಲೇಜುಗಳ ಪ್ರಾಂಶುಪಾಲರು, ಮಾಹಿತಿ ಹಾಗೂ ಅಗತ್ಯ ಕ್ರಮಕ್ಕಾಗಿ.**
3) **ಕಛೇರಿ ಪ್ರತಿ.**